

ಮಂಜುನಾಥ ಹುಲಕೊಪ್ಪದ

# ಯಮಧರ್ಮನ ತೀರ್ಪು

■ **ಕೆ. ಶ್ರೀನಿವಾಸರಾವ್**

ಅಂದು ಭೂಲೋಕದಲ್ಲಿ ಇಬ್ಬರ ಆಯಸ್ಸು ಮುಗಿದಿತ್ತು. ಒಬ್ಬ ಮಹಾನ್ ಕಳ್ಳ, ಸುಲಿಗೆ, ಮೋಸವೇ ಅವನ ಗುರಿ. ಇನ್ನೊಬ್ಬ ಸ್ವಾಮೀಜಿ. ಆಶ್ರಮ ಕಟ್ಟಿ ನಿತ್ಯ ಪೂಜೆ, ಪುನಸ್ಕಾರ, ಉಪನ್ಯಾಸಗಳಲ್ಲಿ ನಿರತರಾಗಿದ್ದವರು.

ಯಮದೂತರು ಇವರನ್ನು ಕರೆತರಲು ಭೂಲೋಕಕ್ಕೆ ಬಂದರು. ಮೊದಲು ಕಳ್ಳನೆಡೆಗೆ ಹೋದರು. ಮಲಗಿದ್ದ ಕಳ್ಳ ಏನನ್ನೂ ವಾದ ಮಾಡದೇ ತನ್ನ ವಿಧಿ ಹಳಿಯುತ್ತ ಅವರ ಹಿಂದೆ ಹೊರಟ. ಮುಂದಿನ ವ್ಯಕ್ತಿ ಸ್ವಾಮೀಜಿಯ ಬಳಿ ಹೋದರು. ಪೂಜೆಯಲ್ಲಿ ನಿರತರಾಗಿದ್ದವರು ಎಷ್ಟು ಒತ್ತಾಯಿಸಿದರೂ ಬರಲೊಪ್ಪಲಿಲ್ಲ. ಕೊನೆಗೆ ಅಂತೂ ಇಂತೂ ದೂತರ ಜೊತೆಗೆ ಹೊರಟರು.

ಎಲ್ಲರೂ ಯಮಪುರಿಯೆಡೆಗೆ ಸಾಗಿದರು. ದಾರಿಯ ನಡುವೆ ಒಂದು ಇರುವೆ ಗೂಡು. ಸಾವಿರಾರು ಇರುವೆಗಳು ಶಿಸ್ತಿನ ಸಿಪಾಯಿಗಳಂತೆ ಮುತ್ತಿ ಕಾರ್ಯನಿರತರಾಗಿದ್ದವು. ಅದನ್ನು ನೋಡಿದ ಕಳ್ಳ ಜಾಗ್ರತೆಯಿಂದ ತುಳಿಯದೇ ಪಕ್ಕದಲ್ಲಿ ಸಾಗಿದ. ಸ್ವಾಮೀಜಿ ಅಲಕ್ಷ್ಯದಿಂದ ಪಕ್ಕಕ್ಕೆ ಹೋಗದೇ ಗೂಡಿನ ಮೇಲೆ ಕಾಲಿಟ್ಟೇ ಮುಂದೆ ಹೋದರು. ಅನತಿದೂರದಲ್ಲಿ ಒಂದು ಮರವಿತ್ತು. ಅದರ ಕೆಳಗೊಬ್ಬ ಭಿಕ್ಷುಕ ಕುಳಿತಿದ್ದ. ಮೈಮೇಲೆ ಒಂಚೂರು ಬಟ್ಟೆಯಿಲ್ಲ, ಗಡಗಡ ನಡುಗುತ್ತಿದ್ದ. ಸ್ವಾಮೀಜಿ ಅವನೆಡೆಗೆ ಕುಹಕದ ನೋಟ ಬೀರಿ ಮುಂದೆ ಸಾಗಿದರು. ಕಳ್ಳನೂ ನೋಡಿದ. ಒಂದರೆಗಳಿಗೆ ನಿಂತು ತಾನು ಹೊದ್ದಿದ್ದ ಕಂಬಳಿಯನ್ನು ಅವನಿಗೆ ಹೊದಿಸಿ ಬಂದ. ಪುನಃ ಮೆರವಣಿಗೆ ಸಾಗಿತು.

ಮುಂದೆ ನಾಯಿಯೊಂದು ರಸ್ತೆಗೆ ಅಡ್ಡವಾಗಿ ಮುಲುಗುತ್ತಾ ಮಲಗಿತ್ತು. ಬಹುಶಃ ದಾಹವಾಗಿತ್ತೇನೋ? ಕಣ್ಣಲ್ಲಿ ಅಶ್ರುಧಾರೆ. ಅದನ್ನು ಗಮನಿಸಿದ ಸ್ವಾಮೀಜಿ ತಮ್ಮ ದಾರಿಗಡ್ಡವಾಗಿ ಮಲಗಿದ್ದ ನಾಯಿಗೆ ಹಚಾ... ಎಂದು ಕಲ್ಲನ್ನು ಬೀರಿದರು. ಆದರೆ ಕಳ್ಳ ಕರುಣೆಯಿಂದ ಪಕ್ಕದ ಗುಂಡಿಯಿಂದ ಬೊಗಸೆಯಲ್ಲಿ ನೀರು ತಂದು ಕುಡಿಸಿದ. ಅದು ಅವನೆಡೆಗೆ ಕೃತಜ್ಞತೆಯ ನೋಟ ಬೀರಿತು.